**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಜೆ ಎಂ. ಎಫ್. ಸಿ, ಮುಧೋಳ**

| | |
|---|---|
| ಸಿ.ಸಿ.ನಂ. | 426/2022 |
| ಸಿ.ಡಬ್ಲೂ | 2 |
| ಪಿ.ಡಬ್ಲೂ | 2 |

| | | |
|---|---|---|
| ಹೆಸರು | :- | ಪ್ರಶಾಂತ ತಳವಾರ |
| ತಂದೆ/ಗಂಡನ ಹೆಸರು | :- | ಮಹಾದೇವ |
| ವಯಸ್ಸು | :- | 32 ವರ್ಷ |
| ಉದ್ಯೋಗ | :- | ವ್ಯಾಪಾರ |
| ವಾಸಸ್ಥಳ | :- | ಮುಧೋಳ |

ಸಾಕ್ಷಿಯನ್ನು ದಿಃ23.08.2024 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು

**ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ ರವರಿಂದ**

1. ದಿಃ25.06.2022 ರಂದು ನನಗೆ ಪಂಚರಾಗಿ ಬರಲು ಚಾಸಾ-7 ರವರು ಕರೆದಿದ್ದರು. ಗೋವುಗಳನ್ನು ಹಿಡಿದಿದ್ದಕ್ಕೆ ಪಂಚರಾಗಿ ಸಹಕರಿಸಲು ಕೋರಿಕೊಂಡಿದ್ದರಿಂದ ನಾನು ಪಂಚರಾಗಿ ಸಂಗೋಳ್ಳಿ ರಾಯಣ್ಣ ಸರ್ಕಲ್‌ಗೆ ಹೋಗಿದ್ದೆನು. ಅಲ್ಲಿ ಹೋದಾಗ ಒಂದು ಟಾಟಾ ಎಸ್ ವಾಹನದಲ್ಲಿ 2 ಎತ್ತು, 1 ಆಕಳನ್ನು ತೆಗೆದುಕೊಂಡು ಹೋಗುತ್ತಿದ್ದು, ನಮ್ಮ ಸಮಕ್ಷಮ ಛಾಯಾಚಿತ್ರ ತೆಗೆದು ಪಂಚನಾಮೆಯನ್ನು ಓದಲು ಕೊಟ್ಟಿದ್ದು, ಅದನ್ನು ಓದಿ ಸಹಿ ಮಾಡಿರುತ್ತೇನೆ. ನನ್ನೊಂದಿಗೆ ಚಾಸಾ-3 ರವರು ಪಂಚರಾಗಿ ಹಾಜರ ಇದ್ದರು. ದುರ್ಗಪ್ಪ ಎನ್ನುವ ವ್ಯಕ್ತಿಯನ್ನು ಹಿಡಿದಿದ್ದು ಪೂರ್ತಿ ಹೆಸರು ನೆನಪಿಲ್ಲ. ಟಾಟಾ ಎಸ್ ವಾಹನವನ್ನು ಆಕಳಿಗೆ ಯಾವುದೇ ಗಾಯ ಆಗದಂತೆ ಪ್ಯಾಕ್ ಮಾಡಿದ್ದು, ಕಸಾಯಿ ಖಾನೆಗೆ ಒಯುತ್ತಿದ್ದರು ಎಂದು ನನಗೆ ತಿಳಿಸಿದರು. ವಾಹನದ ನೋಂದಣಿ ಸಂಖ್ಯೆ ನೆನಪಿಲ್ಲ, ಆರೋಪಿತನನ್ನು ಗುರುತಿಸಲು ಆಗುವುದಿಲ್ಲ. ಸಾಕ್ಷಿಯು ಮುಂದುವರೆದು 3 ರಿಂದ 4 ಜನ ಇದ್ದರು ಎಂದು ಹೇಳುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಅವರಿಬ್ಬರು ಇದ್ದರು ಎಂದು ಹೇಳುತ್ತಾರೆ. ಸಾಕ್ಷಿಗೆ ಈಗ ನಿಪಿ-1 ಪಂಚನಾಮೆ ತೋರಿಸುತ್ತಿದ್ದು, ಅದರ ಮೇಲೆ ಇರುವ ತಮ್ಮ ಸಹಿ ಗುರುತಿಸಿದ್ದರಿಂದ ಸದರಿ ಪಂಚನಾಮೆಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ 2 ಛಾಯಾಚಿತ್ರಗಳನ್ನು ತೋರಿಸುತ್ತಿದ್ದು, ಅವುಗಳಲ್ಲಿ ಇದ್ದ ಟಾಟಾ ಎಸ್ ವಾಹನವನ್ನು ಸಾಕ್ಷಿಯು ಗುರುತಿಸುತ್ತಾರೆ. ಸದರಿ ಛಾಯಾಚಿತ್ರಗಳೊಂದಿಗೆ ಕಲಂ.65(ಬಿ) ಅಡಿ ಪ್ರಮಾಣ ಪತ್ರ ಲಗತ್ತಿಸಿಲ್ಲದ ಕಾರಣ ಸದರಿ ಛಾಯಾಚಿತ್ರಗಳನ್ನು ನಿಶಾನೆ ಎಂದು ಗುರುತಿಸಲು ಆಗುವುದಿಲ್ಲ.

**ಪಾಟೀ ಸವಾಲು : ಶ್ರೀ.ಎಸ್.ಸಿ.ಯು ವಕೀಲರಿಂದ ಆರೋಪಿ ಪರವಾಗಿ**

1. ನಾನು ಬಟ್ಟೆ ಅಂಗಡಿ ನಡೆಸುತ್ತೇನೆ. ಪೂರ್ತಿ ದಿನ ಅಂಗಡಿಯಲ್ಲಿ ಇದ್ದು, ಸದರಿ ಅಂಗಡಿ ನನ್ನ ಸ್ವಂತದ್ದು ಆಗಿದೆ. ನನ್ನ ಕೈಕೆಳಗೆ ಒಬ್ಬ ವ್ಯಕ್ತಿ ಕೆಲಸ ಮಾಡುತ್ತಾನೆ. ನೀವು ಮೂಲತಃ ಸಂಘ ಪರಿವಾರದ ಕಾರ್ಯಕರ್ತ ಎಂದರೆ ಸರಿ. ನೀವು ಪ್ರತಿಭಟನೆ ಇತ್ಯಾದಿಗಳಲ್ಲಿ ಭಾಗವಹಿಸಿದ್ದರಿಂದ ಪೊಲೀಸರ ಪರಿಚಯ ಇದೆ ಎಂದರೆ ಸರಿ. ಕೆಲವೊಂದು ಪ್ರಕರಣಗಳಲ್ಲಿ ಪಂಚರಾಗಿ ಸಹಕರಿಸಲು ನಿಮ್ಮನ್ನು ಪೊಲೀಸರು ಕರೆದಿರುತ್ತಾರೆ ಎಂದರೆ ಸರಿಯಲ್ಲ. ನೀವು ಸಂಘ ಪರಿವಾರದ ಕಾರ್ಯಕರ್ತ ಆದ ಕಾರಣ ಗೋವುಗಳ ಸಾಗಾಟ ಮತ್ತು ಚಿತ್ರಹಿಂಸೆಯ ಘಟನೆಗಳನ್ನು ಖಂಡಿಸುತ್ತೀರಿ ಎಂದರೆ ಸರಿ. ಅದಕ್ಕೆ ಸಂಬಂಧಿಸಿದತೆ ನೀವು ಹಲವಾರು ಬಾರಿ ಹೋರಾಟ ಮಾಡಿದ್ದೀರಿ ಎಂದರೆ ಸರಿ. ಚಾಸಾ-3 ಮತ್ತು ನೀವು ಗೆಳೆಯರಾಗಿದ್ದು, ಚಾಸಾ-3 ರವರು ಸಹ ಸಂಘ ಪರಿವಾರಕ್ಕೆ ಸೇರಿದವರು ಎಂದರೆ ಸರಿ. ಚಾಸಾ-3 ರವರು ಸಹ ನಿಮ್ಮಂತೆ ಹೋರಾಟಗಳಲ್ಲಿ ಭಾಗವಹಿಸುತ್ತಾರೆ ಎಂದರೆ ಸ್ವಲ್ಪ ಭಾಗವಹಿಸುತ್ತಾರೆ ಎಂದರೆ ಸರಿ. ನಿಮಗೆ ಗೋವು ಸಾಗಾಟ ಆಗುತ್ತಿದೆ ಎಂದು ಯಾರು ಹೇಳಿದರು ಎಂದರೆ ಸಾಕ್ಷಿಯು ಚಾಸಾ-7 ರವರು ಕೇವಲ ಪಂಚರಾಗಲು ಸಹಕರಿಸಲು ಕೋರಿಕೊಂಡರು ಎಂದು ಹೇಳುತ್ತಾರೆ. ಟಾಟಾ ಎಸ್ ವಾಹನದಲ್ಲಿ ಕೇವಲ 2 ಪ್ರಾಣಿಗಳನ್ನು ಮಾತ್ರ ಸಾಗಾಟ ಮಾಡಬಹುದು ಎಂದರೆ 3 ನೇ ಪ್ರಾಣಿಗಳನ್ನು ಸಾಗಾಟ ಮಾಡಲು ಬರುವುದಿಲ್ಲ ಎಂದರೆ ಸರಿ. ಆ ದಿನ ಟಾಟಾ ಎಸ್ ವಾಹನದಲ್ಲಿ ನಿಮ್ಮ ಪ್ರಕಾರ ಎಷ್ಟು ಪ್ರಾಣಿಗಳು ಇದ್ದವು ಎಂದರೆ 3 ಎಂದು ಸಾಕ್ಷಿ ಹೇಳುತ್ತಾರೆ. ಟಾಟಾ ಎಸ್ ವಾಹನವನ್ನು ಯಾರು ಚಲಾಯಿಸುತ್ತಿದ್ದರು ಎಂದು ನಿಮಗೆ ಮಾಹಿತಿ ಇಲ್ಲ ಎಂದರೆ ಸರಿ. ಒಟ್ಟು ಎಷ್ಟು ಜನ ಆರೋಪಿತರು ಇದ್ದರು ಎಂದರೆ ನಿಮಗೆ ಮಾಹಿತಿ ಇಲ್ಲ ಎಂದರೆ 4 ಜನ ಇದ್ದರು ಎಂದು ಸಾಕ್ಷಿ ಹೇಳುತ್ತಾರೆ. ಸದರಿ 4 ಜನರ ಹೆಸರು ಹೇಳಬಹುದಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಮುಧೋಳದ ಸಂಗೋಳ್ಳಿ ರಾಯಣ್ಣ ಸರ್ಕಲದಲ್ಲಿ ಮತ್ತು ಬಸಸ್ಟ್ಯಾಂಡ್ ಹತ್ತಿರ ಪೊಲೀಸರು ಗಸ್ತು ಕರ್ತವ್ಯದಲ್ಲಿ ಇರುತ್ತಾರೆ ಎಂದರೆ ಸರಿ. ಪಂಚನಾಮೆಯನ್ನು ಟೈಪ್ ಮಾಡಿದರಾ ಅಥವಾ ಕೈಯಿಂದ ಬರೆದರಾ ಎಂದರೆ ಕೈಯಿಂದ ಬರೆದರು ಎಂದು ಸಾಕ್ಷಿ ಹೇಳುತ್ತಾರೆ. ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ಪೊಲೀಸ ಠಾಣೆಗೆ ಕರೆದುಕೊಂಡು ಹೋಗಿ ಟೈಪ ಮಾಡಿ ಸಹಿ ಪಡೆದರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ಈವತ್ತೆ ನೋಡುತ್ತಿದ್ದೀರಿ ಎಂದರೆ ಸರಿ. ಪೊಲೀಸರು ನಿಮ್ಮ ಪರಿಚಯಸ್ಥರಾದ ಕಾರಣ, ನೀವು ಸಂಘ ಪರಿವಾರದ ಕಾರ್ಯಕರ್ತನಾದ ಕಾರಣ ಮತ್ತು ಆರೋಪಿತರ ವಿರುದ್ಧ ಸಾಕ್ಷಿ ನುಡಿಯುತ್ತೀರಿ ಎಂದು ಯಾವುದೇ ಮಾಹಿತಿ ಇಲ್ಲದಿದ್ದರೂ ಸುಳ್ಳು ಸಾಕ್ಷ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ

**ಪಿ.ಡಬ್ಲೂ.2**

ಸಮಕ್ಷಮ ಯಾವುದೇ ಪಂಚನಾಮೆ ಬರೆದಿಲ್ಲ, ಅದನ್ನು ನೀವು ಓದಿ ತಿಳಿದುಕೊಂಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

Sd/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ಮುಧೋಳ